## ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
## ಬಾಗಲಕೋಟ

# ಒಪ್ಪಂದ ಕೃಷಿ ಹಾಗೂ ವಾಯಿದೆ ವ್ಯಾಪಾರ




ಲೇಖಕರು :

ಶ್ರೀ. ಶ್ರೀಪಾದ ವಿಶ್ವೇಶ್ವರ

ಡಾ. ಸಿ. ಬಿ. ಕೌಜಲಗಿ

ಡಾ. ಜೆ. ವೆಂಕಟೇಶ



ಸಂಶೋಧನಾ ನಿರ್ದೇಶನಾಲಯ,

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,

ಉದ್ಯಾನಗಿರಿ, ಬಾಗಲಕೋಟ – ೫೮೭೧೦೪

## ಒಪ್ಪಂದ ಕೃಷಿ ಹಾಗೂ ವಾಯಿದೆ ವ್ಯಾಪಾರ

ರೈತರು ತಮ್ಮ ಉತ್ಪನಗಳಿಗೆ ಉತ್ತಮ ಬೆಲೆ ಪಡೆಯ ಬೇಕೆಂಬ ಇಚ್ಛೆ ಇದ್ದಾಗ ಅವರು ಕೇವಲ ಕುಶಲ ಉತ್ಪಾದಕರಾಗುವುದರ ಜೊತೆಗೆ ಉತ್ತಮ ಮಾರಾಟಗಾರರೂ ಆಗುವುದು ಅತ್ಯವಶ್ಯಕ. ಅವರು ಬೆಳೆದಂತಹ ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆತಾಗ ಅವರ ಮುಖದಲ್ಲಿ ನಗು ಮೂಡವುದರ ಮೂಲಕ ಅವುಗಳ ಉತ್ಪದನಾ ಹಂತದಲ್ಲಿ ಅವರು ಪಟ್ಟಂತಹ ಶ್ರಮ ಸಾರ್ಥಕವಾದಂತಾಗುತ್ತದೆ. ಕೃಷಿಯಲ್ಲಿ ಕೃಷಿ ಉತ್ಪಾದನೆ ಹೆಚ್ಚಳಗೊಂಡರು ಉತ್ಪಾದನಾ ವೆಚ್ಚವು ಅಧಿಕವಾಗಿದೆ ಹಾಗೂ ಬೆಲೆ ಅನಿಶ್ಚಿತತೆಯಿಂದ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಈ ದಿಶೆಯಲ್ಲಿ ರೈತರು ಆಧುನಿಕ ಮಾರಾಟ ಪದ್ಧತಿಗಳಾದ ಒಪ್ಪಂದ ಕೃಷಿ ಹಾಗೂ ವಾಯಿದಾ ವ್ಯಾಪಾರದಲ್ಲಿ ತೊಡಿಗಿಸಿಕೊಂಡು ಬೆಲೆ ಅನಿಶ್ಚಿತತೆಯ ನಷ್ಟವನ್ನು ಸರಿಪಡಿಸಬಹುದು.

## ಒಪ್ಪಂದ ಕೃಷಿ




ಒಪ್ಪಂಧ ಕೃಷಿ ಎಂದರೆ ಇನ್ನೊಬ್ಬರ ಪರವಾಗಿ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳನ್ನು ನಿಗದಿತ ನಿಯಮಕ್ಕೊಳಪಟ್ಟು ಉತ್ಪಾದಿಸಿ ಸಂಬಂಧಿಸಿದವರಿಗೆ ಪೂರೈಸಲು ರೈತರು ಮುಂಚಿತವಾಗಿಯೇ ಒಪ್ಪಿಕೊಂಡಂತಹ ಒಂದು ವ್ಯವಸ್ಥೆ.

## ಒಪ್ಪಂದ ಕೃಷಿಯ ನಾಲ್ಕು ಪ್ರಮುಖ ಅಂಶಗಳು :

1. ಪೂರ್ವನಿರ್ಧಾರಿತ ಬೆಲೆ
2. ಪೂರ್ವನಿರ್ಧಾರಿತ ಪ್ರಮಾಣ ಅಥವಾ ಎಕರೆ (ಕನಿಷ್ಟ/ಗರಿಷ್ಠ)
3. ಪೂರ್ವನಿರ್ಧಾರಿತ ಗುಣಮಟ್ಟ
4. ಪೂರ್ವನಿಗದಿತ ಸಮಯ

ಈ ವ್ಯವಸ್ಥೆಯಲ್ಲಿ ಖರೀದಿದಾರರು ಉತ್ಪಾದಕರಿಗೆ ಕೆಲವೊಂದು ಪರಿಕರಗಳನ್ನು ಪೂರೈಸುವ, ತಾಂತ್ರಿಕ ಮಾಹಿತಿ ನೀಡುವ ಹಾಗೂ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವ ಕುರಿತು ಒಪ್ಪಂದವೂ ಸೇರಿರುತ್ತದೆ. ಇದಕ್ಕೆ ಪ್ರತಿಯಾಗಿ ರೈತರೂ ಸಹ ನಿಗದಿತ ಉತ್ಪನ್ನವನ್ನು, ನಿಗದಿತ ಪ್ರಮಾಣದಲ್ಲಿ ಖರೀದಿದಾರರಿಗೆ ಪೂರ್ವನಿರ್ಧಾರಿತ ಗುಣಮಟ್ಟದಲ್ಲಿ ನಿಗದಿತ ವೇಳೆಗೆ ಪೂರೈಕೆ ಮಾಡಲು ಬದ್ಧರಾಗಿರುತ್ತಾರೆ. ಜೊತೆಗೆ ಒಪ್ಪಂದ ಕೃಷಿಯಲ್ಲಿ ಪಾಲ್ಗೊಂಡ ಸಂಸ್ಥೆಗಳು ಸಹ ರೈತರು ಉತ್ಪಾದಿಸಿದ ಉತ್ಪನ್ನಗಳನ್ನು ಪೂರ್ವನಿರ್ಧಾರಿತ ಬೆಲೆಯಲ್ಲಿ ಖರೀದಿಸಲು ಬದ್ಧರಾಗಿರುತ್ತಾರೆ.

## ಒಪ್ಪಂದ ಕೃಷಿಯ ಪ್ರಕಾರಗಳು :

### ಒಪ್ಪಂದ ಕೃಷಿಯಲ್ಲಿ ಸಾಮಾನ್ಯವಾಗಿ ಮೂರು ಪ್ರಕಾರಗಳು :-

ಅ) **ಸಂಪಾದನೆ ಒಪ್ಪಂದ :** ಇದರಲ್ಲಿ ಖರೀದಿಸುವ ಹಾಗೂ ಮಾರಾಟ ಮಾಡುವುದಕ್ಕೆ ಸಂಬಂಧಪಟ್ಟಂತೆ ಒಡಂಬಡಿಕೆಗಳು ಒಳಗೊಂಡಿರುತ್ತವೆ

**ಬ) ಭಾಗಶ ಒಪ್ಪಂದ :** ಇದರಲ್ಲಿ ಒಪ್ಪಂದಕ್ಕೊಳಪಟ್ಟ ಉದ್ದಿಮೆಯು ಹೆಚ್ಚಿನ ಪ್ರಮಾಣದ ಕೃಷಿ ಪರಿಕರಗಳನ್ನು ಒದಗಿಸುತ್ತದೆ ಮತ್ತು ಉತ್ಪನ್ನಗಳನ್ನು ಪೂರ್ವ ನಿಗದಿತ ಬೆಲೆಯಲ್ಲಿ ಖರೀದಿಸುತ್ತದೆ.

**ಕ) ಪೂರ್ವ ಪ್ರಮಾಣದ ಒಪ್ಪಂದ :** ಇದರಲ್ಲಿ ಒಪ್ಪಂದಕ್ಕೊಳಪಟ್ಟ ಉದ್ದಿಮೆಯು ಎಲ್ಲಾ ಕೃಷಿ ಪರಿಕರಗಳನ್ನು ಪೂರೈಸುವುದರ ಜೊತೆಗೆ ಉತ್ಪಾದನೆಯ ವಿವಿಧ ಹಂತಗಳನ್ನು ಕೂಡ ಸೂಕ್ತವಾಗಿ ನಿರ್ವಹಿಸುತ್ತದೆ. ರೈತರು ಕೇವಲ ಭೂಮಿ ಹಾಗೂ ಕೂಲಿಯಾಳುಗಳನ್ನು ಒದಗಿಸುತ್ತಾರೆ.

## ಒಪ್ಪಂದ ಕೃಷಿಯ ಅವಶ್ಯಕತೆಗಳು :

ಕೃಷಿ ಉತ್ಪನ್ನಗಳ ಉತ್ಪಾದನೆ, ಮಾರಾಟ ಹಾಗೂ ವಿತರಣೆ ಇತ್ತೀಚಿನ ದಿನಗಳಲ್ಲಿ ಅತಿಯಾಗಿ ನಾಜೂಕಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ

1. ತಾಂತ್ರಿಕತೆಗಳಲ್ಲಿನ ಕ್ರಾಂತಿಕಾರಕ ನೂತನ ಪ್ರಗತಿಯ ಮೂಲಕ ಕೃಷಿ ಉತ್ಪನ್ನಗಳನ್ನು ವೈಶಿಷ್ಟ್ಯಪೂರ್ಣವಾಗಿ ಉತ್ಪಾದಿಸುವುದು ಮಾತ್ರವಲ್ಲದೇ ಇವುಗಳನ್ನು ತಾಜಾ ಸ್ಥಿತಿಯಲ್ಲಿ ಸಂಗ್ರಹಿಸಲು ಶಕ್ಯವಾಗಿದೆ.
2. ಸಂಸ್ಕರಣೆ ಹಾಗೂ ವಿತರಣೆಯಂತಹ ಮಾರಾಟ ರಂಗಗಳಲ್ಲಿ ಸರಿಯಾದ ಉತ್ಪಾದನೆ ಮಟ್ಟ ದಿನೇ ದಿನೇ ಹೆಚ್ಚುತ್ತಿದೆ.
3. ಗುಣಮಟ್ಟವನ್ನು ಸೂಚಿಸುವ ಗುರುತುಗಳಿಗೆ ಒತ್ತು ಕೊಡುವಂತಹ ಹೊಸ ಮಾರಾಟ ಪದ್ಧತಿಗಳ ಆವಿಷ್ಕಾರವಾಗಿದೆ.

## ಒಪ್ಪಂದ ಕೃಷಿಯ ಪ್ರಯೋಜನಗಳು :

**ಒಪ್ಪಂದ ಕೃಷಿಯು ರೈತರಿಗೆ, ಸಂಸ್ಥೆಗಳಿಗೆ ಹಾಗೂ ಬಳಕೆದಾರರಿಗೆ ಅನೇಕ ವಿಧವಾಗಿ ಪ್ರಯೋಜನಕಾರಿಯಾಗಿದೆ. ಕೆಲವು ಪ್ರಮುಖ ಲಾಭಗಳೆಂದರೆ–**

### ರೈತರಿಗೆ :

* ಕೃಷಿ ಪರಿಕರಗಳು ಹಾಗೂ ಉತ್ಪದನಾ ಸೌಲಭ್ಯ/ಸೇವೆಗಳು ಹೆಚ್ಚಿನ ಸಂದರ್ಭಗಳಲ್ಲಿ ಆಯಾ ಸಂಸ್ಥೆಗಳಿಂದ ಪೂರೈಸಲ್ಪಡುತ್ತವೆ.
* ನೂತನ ತಾಂತ್ರಿಕತೆಗಳನ್ನು ರೈತರಿಗೆ ಪರಿಚಯಿಸುತ್ತದೆ, ಅಲ್ಲದೇ ಹೊಸ ಕೌಶಲ್ಯಗಳನ್ನು ರೈತರಿಗೆ ಕಲ್ಪಿಸುತ್ತದೆ.
* ಹೆಚ್ಚಿನ ಒಪ್ಪಂದಗಳಲ್ಲಿ ಬೆಲೆಗಳು ಮೊದಲೇ ತೀರ್ಮಾನವಾಗುವುದರಿಂದ ಬೆಲೆಗಳಿಂದ ರೈತರಿಗಾಗುವ ಗಂಡಾಂತರಗಳನ್ನು ಕಡಿಮೆಗೊಳಿಸಬಹುದು.
* ಸಣ್ಣ ರೈತರಿಗೆ ಲಭ್ಯವಾಗದೇ ಇರುವಂತಹ ಕೆಲವೊಂದು ಹೊಸ ಮಾರುಕಟ್ಟೆಗಳನ್ನು ಪರಿಚಯಿಸುತ್ತವೆ.

### ಸಂಸ್ಥೆಗಳಿಗೆ :

* ಕಚ್ಚಾವಸ್ತುಗಳ ಅಬಾಧಿತ ಮತ್ತು ನಿರಂತರ ಪೂರೈಕೆ
* ಮಾರಾಟ ಬೆಲೆಗಳಲ್ಲಿ ಆಗುತ್ತಿರುವ ಏರುಪೇರುಗಳಿಂದ ರಕ್ಷಣೆ
* ದೀರ್ಘಾವಧಿ ಯೋಜನೆಗಳನ್ನು ಕೈಗೊಳ್ಳುವ ಸಾಧ್ಯತೆ
* ಬೇರೆ ಬೆಳೆಗಳಿಗೆ ಸಹ ಈ ಒಪ್ಪಂದ ಕೃಷಿಯ ಕಲ್ಪನೆಯನ್ನು ವಿಸ್ತರಿಸಬಹುದು
* ದೀರ್ಘಾವಧಿ ಒಪ್ಪಂದಗಳನ್ನು ಮಾಡಿಕೊಳ್ಳಬಹುದು.
* ಸಂಪೂರ್ಣವಾಗಿ ಮೀಸಲಾಗಿರುವ ಪೂರೈಕೆಗೆ ತಳಹದಿ
* ಸಂಸ್ಥೆಯ ಮೇಲಿನ ನಂಬಿಕೆಯನ್ನು ದೃಢಪಡಿಸುತ್ತದೆ.

## ಬಳಕೆದಾರರಿಗೆ :

* ಉತ್ತಮ ಗುಣಮಟ್ಟದ ಕೃಷಿ ಉತ್ಪನ್ನಗಳ ನಿರಂತರ ಪೂರೈಕೆ
* ಬೆಲೆಗಳಲ್ಲಾಗುವ ಏರಿಕೆಗಳನ್ನು ಶಮನಗೊಳಿಸುವುದು
* ಸಂಸ್ಕರಿತ ಹಾಗೂ ಗುಣಮಟ್ಟ ಸೂಚಕ ಗುರುತುಗಳಿರುವ ಉತ್ಪನ್ನಗಳಿಗೆ ಮಾನ್ಯತೆ.
* ಮುಂಚಿತವಾಗಿಯೇ ಅಧಿಕ ಪ್ರಮಾಣದಲ್ಲಿ ಉತ್ಪನ್ನಗಳನ್ನು ಸಂಗ್ರಹಿಸುವುದನ್ನು ತಡೆಗಟ್ಟುತ್ತದೆ.
* ಒಳ್ಳೆಯ ಗುಣಮಟ್ಟದ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ದೊರೆಯುವಂತೆ ಮಾಡುತ್ತದೆ.

## ವಾಯಿದೆ ವ್ಯಾಪಾರ :

* ಇದು ಕೃಷಿ ಹುಟ್ಟುವಳಿಗಳ ವಿನಿಮಯ ಮಾರುಕಟ್ಟೆಯಲ್ಲಿ ನಡೆಯುವ ವ್ಯಾಪಾರ ಚಟುವಟಿಕೆ.
* ಈ ಚಟುವಟಿಕೆಯಿಂದ ಕೃಷಿ ಹುಟ್ಟುವಳಿಗಳ ಬೆಲೆಯಲ್ಲಿ ಆಗುವ ತೀವ್ರವಾದ ಏರು-ಪೇರುಗಳಿಂದಾಗುವ ನಷ್ಟಕ್ಕೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳಬಹುದಾಗಿದೆ.
* ಕೃಷಿ ಹುಟ್ಟುವಳಿಗಳ ವಿನಿಮಯ ಮಾರುಕಟ್ಟೆಗಳು ಒಂದು ಕೃಷಿ ಹುಟ್ಟುವಳಿಗೆ ಅಥವಾ ಕೆಲವು ಗುಂಪಿನ ಕೃಷಿ ಹುಟ್ಟುವಳಿಗಳಿಗಾಗಿ ಸ್ಥಾಪಿಸಲ್ಪಟ್ಟಿವೆ.
* ಈ ಮಾರುಕಟ್ಟೆಗಳು ಫಾರ್ವರ್ಡ್ ಮಾರುಕಟ್ಟೆ ನಿಯಂತ್ರಣ ಕಾಯಿದೆಯಡಿಯಲ್ಲಿ ಸ್ಥಾಪಿತಗುತ್ತದೆ.

## ಮಾರಾಟ ವ್ಯವಸ್ಥೆಯ ಕೆಲ ಲಕ್ಷಣಗಳು :

* ವ್ಯಾಪಾರ ಜಾಗತೀಕರಣದಿಂದ ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಆಗುವ ಏರು-ಪೇರುಗಳು ನಮ್ಮ ದೇಶೀಯ ಮಾರುಕಟ್ಟೆ ಮೇಲೂ ಪರಿಣಾಮವಾಗುವ ಸಂಭವಗಳು ಹೆಚ್ಚಿಗೆಯಾದ್ದರಿಂದ ನಮ್ಮ ದೇಶೀಯ ಮಾರುಕಟ್ಟೆಗಳನ್ನು ಕೃಷಿ ಹುಟ್ಟುವಳಿಗಳ ವಿನಿಮಯ ಮಾರುಕಟ್ಟೆಗಳ ಮುಖಾಂತರ ಜಾಗತಿಕ ಮಾರುಕಟ್ಟೆಗೆ ಜೋಡಿಸಬಹುದು. ಇದು ಬೆಲೆಗಳ ಏರು-ಪೇರಿನಿಂದಾಗುವ ನಷ್ಟದಿಂದ ಪಾರು ಮಾಡುವ ವ್ಯವಸ್ಥೆಯಾಗಿದೆ.
* ಕೃಷಿ ಹುಟ್ಟುವಳಿಗಳ ವಿನಿಯಮ ಮಾರುಕಟ್ಟೆಗಳಲ್ಲಿ ಯಾವಾಗಲೂ ಸ್ಪರ್ಧಾತ್ಮಕ ಖರೀದಿದಾರರು ಮತ್ತು ಮಾರಾಟಗಾರರು ತಯಾರಿಯಲ್ಲಿ ಇರುತ್ತಾರೆ.
* ಹುಟ್ಟುವಳಿಗಳ ದೊಡ್ಡ ಪ್ರಮಾಣದ ವ್ಯಾಪಾರ ನಡೆಯುತ್ತದೆ.

## ಸದ್ಯ ನಮ್ಮ ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಷ್ಟ್ರೀಯ ಮಟ್ಟದ ಹಾಗೂ ಪ್ರಾದೇಶಿಕ ಮಟ್ಟದ ಭವಿಷ್ಯತ್ತಿನ/ ವಾಯಿದಾ ವ್ಯಾಪಾರ ಕೇಂದ್ರಗಳ ವಿವರ ಇಂತಿದೆ:

1. ಪೂರ್ವ ಭಾರತ ಹತ್ತಿಯ ಸಂಘ ನಿ., (ಇಆಯ್‌ಸಿಎ) ಮುಂಬೈ.
2. ರಾಷ್ಟ್ರೀಯ ಉತ್ಪನ್ನಗಳ ಹಾಗೂ ಅವುಗಳ ಉತ್ಪತ್ತಿ (ಎನ್‌ಸಿಡಿಎಕ್ಸ್), ಮುಂಬೈ.
3. ರಾಷ್ಟ್ರೀಯ ಬಹು ಉತ್ಪನ್ನಗಳ ವಿನಿಮಯ ಕೇಂದ್ರ (ಎನ್‌ಎಮ್‌ಸಿಇ) ಅಹಮದಾಬಾದ.
4. ಎಸಿಇ ಉತ್ಪನ್ನಗಳ ವಿನಿಮಯ ಕೇಂದ್ರ, ಅಹಮದಾಬಾದ
5. ಭಾರತೀಯ ಉತ್ಪನ್ನಗಳ ವಿನಿಮಯ ಕೇಂದ್ರ (ಆಯ್‌ಸಿಎಕ್ಸ್), ಹೊಸದೆಹಲಿ.
6. ಪಿಇಸಿ ನಿಯಮಿತ, ಹೊಸದೆಹಲಿ.
7. ಬಹುವಿಧ ಉತ್ಪನ್ನಗಳ ವಿನಿಮಯ ಕೇಂದ್ರ (ಎಮ್‌ಸಿಎಕ್ಸ್), ಮುಂಬೈ.
8. ಮೆಟಲ್ಸ್ ಮತ್ತು ಮಿನರಲ್ಸ್ ಟ್ರೇಡಿಂಗ್ ನಿಗಮ, (ಎಮ್.ಎಮ್.ಟಿ.ಸಿ) ಹೊಸದೆಹಲಿ.

ಇವುಗಳನ್ನು ಸ್ಥಾಪಿಸಲಾಗಿದ್ದು, ಇವು ಕೃಷಿ ಉತ್ಪನ್ನಗಳಾದ ಅರಳೆ, ಕಬ್ಬು, ಸೆಣಬು, ಸೆಣಬಿನ ಚೀಲ, ಹವೀಜ (ಕೊತ್ತಂಬರಿ ಬೀಜ), ಯಾಲಕ್ಕಿ, ಅರಿಷಿಣ, ಶೇಂಗಾ, ಮೆಣಸು, ಕೆಂಪು ಮೆಣಸಿನಕಾಯಿ (ಒಣ ಮೆಣಸಿನಕಾಯಿ), ಜೀರಿಗೆ, ತಾಳೆ (ಪಾಮ್) ಎಣ್ಣೆ, ಸಾಸಿವೆ ತೈಲ, ಎಳ್ಳೆಣ್ಣೆ, ಒಣ ಕೊಬ್ಬರಿ ಹಾಗೂ ಅದರ ತೈಲ(ಕೊಬ್ಬರಿ ಎಣ್ಣೆ), ಸೋಯಾ ಅವರೆ, ಪುನರ್ ಶುದ್ಧೀಕರಿಸಲ್ಪಟ್ಟ ಸೋಯಾ ತೈಲ, ಹಳದಿ ಸೋಯಾ ಹಿಂಡಿ (ಸೋಯಾ ಮಿಲ್), ಭತ್ತದ ಹೊಟ್ಟಿನ ಎಣ್ಣೆ ಔಡಲ (ಹರಳು) ಎಣ್ಣೆ, ಹತ್ತಿ ಬೀಜ ಹಿಂಡಿ, ಕಡಲೆ, ವಠಾಣಿ, ತೊಗರಿ, ಉದ್ದು, ಆಲೂಗಡ್ಡೆ, ಬಾರ್ಲಿ, ಮುಸುಕಿನ ಜೋಳದ ಆಹಾರ, ಹಳದಿ ಹಾಗೂ ಕೆಂಪು ಗೋವಿನ ಜೋಳ, ಗೋಧಿ, ಬದಾಮು, ರಬ್ಬರ್, ಗೋರಿಕಾಯಿ, ಅಂಟು, ಸಕ್ಕರೆ, ಬೆಲ್ಲ, ಅಕ್ಕಿ, ಇಸಬ್‌ಗೋಲ್ (ಆಳ್ವಿ), ಪುದಿನಾ ತೈಲ, ಪುದಿನಾ ಹರಳು ಹಾಗೂ ಚೂರು, ಗೋಧಿ ಬೀಜ ಹಾಗೂ ಗೋರಿಕಾಯಿ ಮುಂತಾದವುಗಳಲ್ಲದೆ, ಬಂಗಾರ, ಬೆಳ್ಳಿ, ತಾಮ್ರ, ಆಲ್ಯೂಮಿನಿಯಂ, ಸತು, ಸ್ಟೀಲ್, ನಿಕೆಲ್, ಪ್ಲ್ಯಾಟಿನಮ್, ಸೀಸ ಇತ್ಯಾದಿ ಲೋಹಗಳ ಭವಿಷ್ಯತ್ತಿನ ವ್ಯಾಪಾರದಲ್ಲಿ ತೊಡಗಿವೆ.

## ಭವಿಷ್ಯತ್ತಿನ/ವಾಯದಾ ವ್ಯಾಪಾರದ ಲಾಭಗಳು :

ವಾಯಿದಾ ವ್ಯಾಪಾರದಲ್ಲಿ ಉತ್ಪನ್ನಗಳ, ಬೆಲೆಗಳ ಹಾಗೂ ಪ್ರಮಾಣಗಳ ಕುರಿತು ಒಪ್ಪಂದ ಮಾಡಿಕೊಳ್ಳುವ ಬೇಲಿಕರಣ ವ್ಯಾಪಾರಸ್ಥರು (ಹೆಡ್ಜರ್ಸ್) ಊಹೆ ಆಧಾರದ ಮೇಲೆ ವ್ಯವಹಾರ ಮಾಡುವ (ಸಟ್ಟಾ ವ್ಯಾಪಾರಸ್ಥರು/ಸ್ಪೆಕ್ಯೂಲೇಟರ್ಸ್) ಮತ್ತು ಮಧ್ಯಸ್ಥ ವ್ಯಾಪಾರಸ್ಥರು (ಆರ್ಬಿಟ್ರೇಜರ್ಸ್) ಮಗ್ನರಾಗಿದ್ದು ವಿಶೇಷವಾಗಿ ಕೃಷಿ ಉತ್ಪನ್ನಗಳಿಗೆ

ಕೃಷಿಕರು ನೇರವಾಗಿ ವಾಯಿದಾ ವ್ಯವಹಾರಗಳಲ್ಲಿ ಭಾಗವಹಿಸದೇ ಇದ್ದರೂ ಮುಂದಾಗಬಹುದಾದ (ವಾಯಿದಾ) ಬೆಲೆಗಳ ಬಗ್ಗೆ ಸೂಚನೆಗಳನ್ನು ಪಡೆದುಕೊಂಡು; ಕೊಯ್ಲು ನಂತರದ ಸುಗ್ಗಿಯ ಕಾಲದಲ್ಲಿ ಮತ್ತು ಸುಗ್ಗಿಯಲ್ಲದ ಕಾಲದಲ್ಲಿ ತಾವು ಬೆಳೆದ ಕೃಷಿ ಉತ್ಪನ್ನಗಳ ಮಾರಾಟ ಮಾಡುವ ಬಗ್ಗೆ ಯೋಗ್ಯ ನಿರ್ಣಯ ಕೈಗೊಂಡು ಆರ್ಥಿಕ ಲಾಭ ಹೊಂದಬಹುದಲ್ಲದೇ, ತನ್ಮೂಲಕ ವಿವಿಧ ಋತುಮಾನಗಳಲ್ಲಿ ಬೆಲೆಗಳಲ್ಲಿ ದಿಢೀರ್ ಏರಿಕೆ ಹಾಗೂ ಇಳಿಕೆಯ ಮಟ್ಟವನ್ನು ಕಡಿಮೆಗೊಳಿಸಬಹುದು. ಇದಲ್ಲದೇ ಅವರು ಯಾವ ಬೆಳೆಯನ್ನು ಯಾವ ಕಾಲದಲ್ಲಿ ಬೆಳೆದರೆ ಸೂಕ್ತ ಎನ್ನುವ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಕೃಷಿಕರು ತಮ್ಮ ಕೃಷಿ ಉತ್ಪನ್ನಗಳ ಬೆಲೆಗಳ ಕುರಿತು ಚೌಕಾಸಿ ಮಾಡುವ ಸಾಮರ್ಥ್ಯವೂ ಹೆಚ್ಚುತ್ತದೆ. ಅಲ್ಲದೇ ವ್ಯಾಪಾರಸ್ಥರು, ನಿರ್ಯಾತದಾರರು, ಆಮದುದಾರರು, ಸಂಸ್ಕರಣೆದಾರರು ಹಾಗೂ ಉದ್ದಿಮೆದಾರರು/ತಯಾರಿಕೆದಾರರು ವಾಯಿದಾ ವ್ಯಾಪಾರ ಒಪ್ಪಂದಗಳ ವ್ಯವಹಾರಗಳಿಂದ ಅವರವರ ಕಾಯಕ ಸುಗಮವಾಗಿ ಜರುಗಿಸಲು ಅನುಕೂಲತೆ ಉಂಟಾಗುತ್ತಲಿದೆ.

ಲೇಖಕರು :
ಶ್ರೀ. ಶ್ರೀಪಾದ ವಿಶ್ವೇಶ್ವರ
ಡಾ. ಸಿ. ಬಿ. ಕೌಜಲಗಿ
ಡಾ. ಜೆ. ವೆಂಕಟೇಶ

9880079891, 9611859930